**Witness present and duly sworn on : 06.09.2025.**

**Cross Examination by learned counsel for accused :-**

ನಾನು ಬೆಂಗಳೂರಿನ ಸಹಕಾರ ನಗರದಲ್ಲಿ 2008 ರಿಂದ ವಾಸವಾಗಿದ್ದೇನೆ. ಫಿರ್ಯಾದುದಾರರ ಸಂಸ್ಥೆಯಲ್ಲಿ ಪ್ರಸ್ತುತ ನಾನು ಮತ್ತು ಶಶಿಧರ್ ಸಿ ಆರ್ ರವರು ನಿರ್ದೇಶಕರಾಗಿರುತ್ತೇವೆ. ಸದರಿ ಕಂಪನಿಯು 20.05.2020 ರಂದು ನೊಂದಣಿಯಾಗಿರುತ್ತದೆ. ನಮ್ಮ ಕಂಪನಿ ಪ್ರಾರಂಭವಾಗುವ ಸಮಯದಲ್ಲಿ 2 ನೇ ಆಪಾದಿತರು ಕೂಡ ನಮ್ಮ ಕಂಪನಿಯ ನಿರ್ದೇಶರಾಗಿದ್ದರು ಎಂದರೆ ಸರಿ. ಫಿರ್ಯಾದು ಕಂಪನಿ ಮತ್ತು 1 ನೇ ಆಪಾದಿತ ಕಂಪನಿ system concern ಎಂದರೆ ಸರಿಯಲ್ಲ. ನಮ್ಮ ಕಂಪನಿಯವತಿಯಿಂದ project ಮಾಡಲು ಕಡ್ಡಾಯವಾಗಿ ಲೈಸೆನ್ಸ್ ಹೊಂದರಬೇಕು ಎಂದರೆ ಸರಿಯಲ್ಲ. ಸಾಕ್ಷಿಯು ಲೈಸೆನ್ಸ್ ಹೊಂದಿದವರ ಹೆಸರಿನಲ್ಲಿ ಅಥವಾ ಅವರೊಂದಿಗೆ ಟೈ ಅಪ್ ಮಾಡಿಕೊಂಡು ಪ್ರಾಜೆಕ್ಟ್ ಅನ್ನು ಪಡೆದುಕೊಳ್ಳಬಹುದು ಎಂದು ನುಡಿಯುತ್ತಾರೆ. ಪ್ರಾಜೆಕ್ಟ್ ಅನ್ನು Wistron Info com Pvt Ltd., ರವರಿಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು Wistron Info com Pvt Ltd., ನವರು Thai Chung Engineer thaiwan ರವರಿಗೆ ನೀಡಿದ್ದು ಅವರು ಆಪಾದಿತರ ಸಂಸ್ಥೆಗೆ ಸಬ್ ಕಾಂಟ್ರ್ಯಾಕ್ಟ್ ನೀಡಿದ್ದಾರೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನೀವು ನೋಟೀಸಿನಲ್ಲಾಗಲೀ, ಮುಖ್ಯ ವಿಚಾರಣೆಯಲ್ಲಾಗಲೀ ಅಥವಾ ನನ್ನ ಪ್ರಮಾಣ ಪತ್ರದಲ್ಲಾಗಲೀ ಹೇಳಿದ್ದೀರೋ ಎಂಬ ಪ್ರಶ್ನೆಗೆ ಸಾಕ್ಷಿಯು ಅದರ ಅಗತ್ಯತೆ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು SBM Electrical ನಲ್ಲಿ purchase

dept ನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಅಲ್ಲಿ ಕೆಲಸ ಮಾಡುತ್ತಿದ್ದ ಸಲುವಾಗಿ 1 ಲಕ್ಷ ಸಂಬಳ ಕೂಡ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು 1 ನೇ ಆಪಾದಿತರ ಹೆಸರಿನಲ್ಲಿದ್ದ ಸುಮಾರು 10-12 ಪ್ರಾಜೆಕ್ಟ್ ಅನ್ನು ನಾವು ಮಾಡಿದ್ದು ಅದರ ಬಾಬ್ತು ಬಾಯಿದೆರೆಯಲ್ಲಿ ಅಗ್ರಿಮೆಂಟ್ ಆಗಿದ್ದು ಅದರ ಬಾಬ್ತು ಹಣ ನೀಡಿದ್ದರು ಎಂದು ನುಡಿಯುತ್ತಾರೆ. ನಾವು 1 ನೇ ಆಪಾದಿತರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ನನಗೆ ಒಂದೂವರೆ ಲಕ್ಷ ಸಂಬಳ ನೀಡುತ್ತಿದ್ದರು ಎಂದರೆ ಸರಿಯಲ್ಲ. ನಾನು 1 ನೇ ಆಪಾದಿತರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಪೂರ್ವದಲ್ಲಿ Wistron Info com Pvt Ltd., ನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. Wistron Info com Pvt Ltd., ನಲ್ಲಿ ನಾನು ವಂಚನೆ ಗೈದಿರುವ ಕಾರಣ ನನ್ನನ್ನು ಕೆಲಸದಿಂದ ತೆಗೆದುಹಾಕಿದ್ದಾರೆ ಎಂದರೆ ಸರಿಯಲ್ಲ. ನನಗೆ ಕೆಲಸ ಇಲ್ಲದ ಕಾರಣ 1 ನೇ ಆಪಾದಿತರ ಕಂಪನಿ ನನಗೆ ಕೆಲಸ ನೀಡಿದ್ದಾರೆ ಎಂದರೆ ಸರಿಯಲ್ಲ. ಪಿರ್ಯಾದು ಕಂಪನಿಗೆ 2 ನೇ ಆಪಾದಿತರು 2021 ರಲ್ಲಿ ರಿಸೈನ್ ಮಾಡಿರುತ್ತಾರೆ. 2021 ರಿಂದ 2025 ರ ಅವದಿಯಲ್ಲಿ 1 ನೇ ಆಪಾದಿತರ ಸಂಸ್ಥೆಯ ಒಂದು ಪ್ರಾಜೆಕ್ಟ್ ಮತ್ತು ರಾಕೋಲ್ ಇಂಡಿಯಾ ಪ್ರೈ. ಲಿ., ನ ಒಂದು ಪ್ರಾಜೆಕ್ಟ್ ಅನ್ನು ನಮ್ಮ ಕಂಪನಿಯ ವತಿಯಿಂದ ಮಾಡಿರುತ್ತೇವೆ. ಪಿರ್ಯಾದು ಕಂಪನಿಯ ಬ್ಯಾಂಕ್ ಅಕೌಂಟ್ SBI saharaka nagara branch ನಲ್ಲಿ 2021 ರಲ್ಲಿ ತೆರೆದಿರುತ್ತೇವೆ. ವಿವಾದಿತ ಚೆಕ್ಕನ್ನು 2024 ಮೇ 2 ನೇ ವಾರದಂದು 2 ನೇ ಆಪಾದಿತರು ಹೆಬ್ಬಾಳದಲ್ಲಿ ನನಗೆ ನೀಡಿದ್ದರು. ದಿನಾಂಕ ನನಗೆ ಸರಿಯಾಗಿ ನೆನಪಿಲ್ಲ. ವಿವಾದಿತ ಚೆಕ್ಕನ್ನು 2 ನೇ ಆಪಾದಿತರು ನನಗೆ ನೀಡಿಲ್ಲ ಬದಲಿಗೆ ಸದರಿ ಚೆಕ್ಕನ್ನು ನಾನು ಆಪಾದಿತರ

ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಕಳವು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 (ಎ) 2 ನೇ ಆಪಾದಿತರ ಸಹಿ ಅಲ್ಲ ಎಂದರೆ ಸರಿಯಲ್ಲ. 2 ನೇ ಆಪಾದಿತರು 2020 ರಲ್ಲಿ 40 ಚೆಕ್ಕುಗಳುಳ್ಳ ಚೆಕ್ಕು ಪುಸ್ತಕ ಕಳೆದುಹೋಗಿದೆ ಎಂದು ಸ್ಟಾಪ್ ಪೇಮೆಂಟ್ ಮಾಹಿತಿಯನ್ನು Axis bank ಗೆ ನೀಡಿದ್ದಾರೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ 1(ಎ) ಮತ್ತು ನಿಪಿ 12 ರಲ್ಲಿರುವ ಸಹಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ನಿಪಿ 1(ಎ) 2 ನೇ ಆಪಾದಿತರ ಸಹಿ ಆಗಿದ್ದು ನಿಪಿ 12 ರಲ್ಲಿರುವ ಸಹಿಯ ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಕ್ಷಿಯು ಮುಂದುವರೆದು 2 ನೇ ಆಪಾದಿತರು ಇದರ ಪೂರ್ವದಲ್ಲಿ ಒಂದು ಚೆಕ್ಕನ್ನು ನೀಡಿದ್ದು ಅದು ಅಮಾನ್ಯಗೊಂಡಿದ್ದು ಅಮಾನ್ಯಗೊಂಡ ಚೆಕ್ಕಿನ ಪ್ರತಿ ನಮ್ಮ ಬಳಿ ಇದೆ ಎಂದು ನುಡಿಯುತ್ತಾರೆ. ನಿಪಿ 12 ಮತ್ತು ನಿಪಿ 15 ರಲ್ಲಿರುವ ಸಹಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ನಿಪಿ 15 ದಾಖಲೆಯನ್ನು ಆಪಾದಿತರ ಕಂಪನಿಯ ಯವುದಾದರೂ ಸಿಬ್ಬಂಧಿ ಸ್ವೀಕರಿಸಿರಬಹುದು ಎಂದು ನುಡಿಯುತ್ತಾರೆ. ನಿಪಿ 15 ರಲ್ಲಿರುವ ಸಹಿ 2 ನೇ ಆಪಾದಿತರ ಸಹಿ ಆಗಿದ್ದು ಸಿಬ್ಬಂದಿಯವರ ಸಹಿ ಅಲ್ಲ ಎಂದರೆ ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನಾವು ತುಲನೆ ಮಾಡಲು ಹೋಗುವುದಿಲ್ಲ, ನೋಟೀಸನ್ನು ಪಡೆದುಕೊಂಡಿರುವ ಬಗ್ಗೆ ಅವರಿಂದ ಸ್ವೀಕೃತಿ ಪತ್ರ ಬಂದಿದೆ ಎಂದು ನುಡಿಯುತ್ತಾರೆ. ನಿಪಿ 15 ಮತ್ತು 16 ರಲ್ಲಿರುವ ಸಹಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಅದರಲ್ಲಿ ಯಾರು ಸಹಿಯನ್ನು ಹಾಕಿದ್ದಾರೆ ಎಂದು ನಾವು ನೋಡಲು ಹೋಗುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 14 ರಿಂದ 16 ದಾಖಲೆಯನ್ನು ನಾವು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ 14

purchase order / work order ಆಗಿದ್ದು ನಾವು ಕೆಲಸ ಮಾಡುವ ಪೂರ್ವದಲ್ಲಿ ನಮಗೆ ನೀಡಿರುವ ಆರ್ಡರ್ ಎಂದು ನುಡಿಯುತ್ತಾರೆ. ನಿಪಿ 14 ರಲ್ಲಿ ಎಲ್ಲಿಯೂ ಕೂಡ work order ಎಂದು ನಮೂದು ಆಗಿಲ್ಲ ಎಂದರೆ ಸಾಕ್ಷಿಯು purchase order and work order ಎಂಬುದು ಒಂದೇ ಅರ್ಥ ಎಂದು ನುಡಿಯುತ್ತಾರೆ. ನಿಪಿ 14 ರ ಪುಟ ಸಂ.2 ರಲ್ಲಿ ಎ ಇಂದು ಯು ವರೆಗಿನ ಕೆಲಸಕ್ಕೆ ತಲಾ ಎಷ್ಟು ಮೊತ್ತ ಎಂದು ನಮೂದಾಗಿಲ್ಲ ಎಂದರೆ ಸರಿ. ಸಾಕ್ಷಿಯು ಒಟ್ಟು ಕೆಲಸದ ಬಾಬ್ತು ಎಷ್ಟು ಮೊತ್ತ ಎಂದು ನಮೂದಾಗಿದ್ದು ಆ ರೀತಿ ವಿಭಜಿಸಿ ಮೊತ್ತವನ್ನು ಬರೆಯುವ ಪದ್ದತಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ 14 ರಲ್ಲಿ 1 ಕೋಟಿ 50 ಲಕ್ಷ ಮೊತ್ತ ಎಂದು ನಮೂದಾಗಿದ್ದು ಆ ಪೈಕಿ ಆಪಾದಿತರಿಂದ ಎಷ್ಟು ಮೊತ್ತ ಸಂದಾಯವಾಗಿದೆ ಎಂದರೆ ಸಾಕ್ಷಿಯು ಯಾವುದೇ ಮೊತ್ತ ಸಂದಾಯವಾಗಿಲ್ಲ ಎಂದು ನುಡಿಯುತ್ತಾರೆ. ಒಟ್ಟು ಮೊತ್ತ 1 ಕೋಟಿ 50 ಲಕ್ಷ ಆಗಿದ್ದಲ್ಲಿ ಯಾವ ಆಧಾರದ ಮೇರೆಗೆ ವಿವಾದಿತ ಚೆಕ್ಕನ್ನು 77 ಲಕ್ಷಕ್ಕೆ ನೀಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಮೇಲೆ ಹೇಳಿದ ಮೊತ್ತದ ಭಾಗಶಃ ಮೊತ್ತದ ಬಾಬ್ತು ಚೆಕ್ಕನ್ನು ನೀಡಿದ್ದಾರೆ ಎಂದು ನುಡಿಯುತ್ತಾರೆ. 1 ಕೋಟಿ 50 ಲಕ್ಷದ ಬಾಬ್ತು 77 ಲಕ್ಷಕ್ಕೆ ಚೆಕ್ಕನ್ನು ನೀಡಿದ್ದು ಎಷ್ಟು ಬಾಕಿ ಮೊತ್ತ ಇದೆ ಎಂದು ನೋಟೀಸಿನಲ್ಲಿ ಹೇಳಿದ್ದೀರೋ ಎಂಬ ಪ್ರಶ್ನೆಗೆ ಸಾಕ್ಷಿಯು ಆ ಬಗ್ಗೆ ಹೇಳಿಲ್ಲ ಎಷ್ಟು ಮೊತ್ತದ ಚೆಕ್ಕು ಅಮಾನ್ಯಗೊಂಡಿದೆಯೋ ಅದರ ಬಾಬ್ತು ಮಾತ್ರ ನೋಟೀಸಿನಲ್ಲಿ ಹೇಳಿದ್ದೇವೆ ಎಂದು ನುಡಿಯುತ್ತಾರೆ. ಆಪಾದಿತರ ಕಂಪನಿಯಿಂದ ವಿವಾದಿತ ಚೆಕ್ಕನ್ನು ನಮಗೆ ನೀಡಿಲ್ಲ ಮತ್ತು ಎಲ್ಲಾ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಪ್ರಾಜೆಕ್ಟ್ ಅನ್ನು ಆಪಾದಿತರ

ಕಂಪನಿಯವರು ಅವರ ಲೈಸೆನ್ಸ್ ಅಡಿಯಲ್ಲಿ ಮಾಡಿದ್ದು ನಮ್ಮ ಕಂಪನಿಯಿಂದ ಮಾಡಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ಪ್ರಾಜೆಕ್ಟ್ ಬಗ್ಗೆ ಜಿ ಎಸ್ ಟಿ ಕಟ್ಟಿದ್ದೀರೋ ಎಂಬ ಪ್ರಶ್ನೆಗೆ ಸಾಕ್ಷಿಯು ಆಪಾದಿತರ ಕಂಪನಿಯಿಂದ ನಮಗೆ ಹಣ ಬರದೇ ಇದ್ದ ಕಾರಣ 27 ಲಕ್ಷ ಜಿ ಎಸ್ ಟಿ ಹಣ ಕಟ್ಟಲು ನಮ್ಮ ಬಳಿ ಇಲ್ಲದೇ ಇದ್ದ ಕಾರಣ ನಾವು ಇಟ್ಟಿಲ್ಲ ಎಂದು ನುಡಿಯುತ್ತಾರೆ. ಬಿಲ್ಲಿನ ಹಣ ಬಂದಿಲ್ಲ ಎಂದು ಜಿ ಎಸ್ ಟಿ ಯಲ್ಲಿ ಕಾಣಿಸಿದ್ದೀರೋ ಎಂಬ ಪ್ರಶ್ನೆಗೆ ಸಾಕ್ಷಿಯು ಆ ರೀತಿ ಕಾಣಿಸುವ option ಅದರಲ್ಲಿ ಇಲ್ಲ ಎಂದು ನುಡಿಯುತ್ತಾರೆ. 1 ಕೋಟಿ 50 ಲಕ್ಷಕ್ಕೆ ಇನ್ವಾಯಿಸ್ ರೈಸ್ ಆದ ಬಗ್ಗೆ ಜಿ ಎಸ್ ಟಿ ಕಟ್ಟಿಲ್ಲ ಎಂದು ನಿಮಗೆ ನೋಟೀಸು ಬಂದಿದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ಆಪಾದಿತರ ಕಂಪನಿಯವರು returns file ಮಾಡಿದ ಸಮಯದಲ್ಲಿ ಜಿ ಎಸ್ ಟಿ ಕಟ್ಟಿಲ್ಲ ಎಂದು ನಮಗೆ ನೋಟೀಸು ಬರುತ್ತದೆ ಎಂದು ನುಡಿಯುತ್ತಾರೆ. ಆಪಾದಿತ ಕಂಪನಿಯವರು ನಮಗೆ ಯಾವುದೇ ಪ್ರಾಜೆಕ್ಟ್ ನೀಡದೇ ಇದ್ದ ಕಾರಣ ಬಿಲ್ಲು ರೈಸ್ ಮಾಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. ಆಪಾದಿತರ ಕಂಪನಿಯವರು ಲೈಸೆನ್ಸ್ ಹೊಂದಿರುವ ಕಾರಣ ಮೇಲೆ ಹೇಳಿದ ಪ್ರಾಜೆಕ್ಟ್ ಅನ್ನು ಅವರೇ ಪೂರ್ಣಗೊಳಿಸಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಮತ್ತು ಆಪಾದಿತರ ಕಂಪನಿಯವರು ಯಾವುದೇ ವ್ಯವಹಾರ ನಡೆಯದೇ ಇದ್ದ ಕಾರಣ ಅವರು ನಮಗೆ ಹಣ ನೀಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. Wistron Info com Pvt Ltd., ರವರ ಪ್ರಾಜೆಕ್ಟ್ ಅನ್ನು ನಾವು ಆಪಾದಿತ ಕಂಪನಿಯ Super grade license ಅನ್ನು ಟ್ಯಾಗ್ ಮಾಡಿ ಪೂರ್ಣಗೊಳಿಸಿರುತ್ತೇವೆ. ನಾವು ಲೈಸೆನ್ಸ್ ಹೊಂದಿರದೇ ಇದ್ದ ಕಾರಣ ಪ್ರಾಜೆಕ್ಟ್ ಅನ್ನು ತೆಗೆದುಕೊಳ್ಳುವ capacity ಹೊಂದಿಲ್ಲ

ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆಪಾದಿತ ಕಂಪನಿಯವರಿಗೆ ತ್ರಾಯಚೂರ್ ಇಂಜಿನಯರ್ ರವರಿಂದ ಪ್ರಾಜೆಕ್ಟ್ ಬಂದ ಸಮಯದಲ್ಲಿ ಆಪಾದಿತ ಕಂಪನಿಯವರು ಕೂಡ ಲೈಸೆನ್ಸ್ ಹೊಂದಿದರಲ್ಲಿ ಸದರಿ ಪ್ರಾಜೆಕ್ಟ್ ಬಂದು 3 ತಿಂಗಳ ನಂತರ ಆಪಾದಿತ ಕಂಪನಿಯವರು ಲೈಸೆನ್ಸ್ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಆಪಾದಿತ ಕಂಪನಿಯರು ಲೈಸೆನ್ಸ್ ಹೊಂದಿರುವ ಕಾರಣ ಅವರೇ ಸ್ವತಃ Wistron Info com Pvt Ltd., ರವರ ಪ್ರಾಜೆಕ್ಟ್ ಅನ್ನು ಪೂರ್ಣಗೊಳಿಸಿ ಅವರಿಂದ ಹಣ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು Wistron Info com Pvt Ltd., ರವರು Thai Chung ಇಂಜಿನಿಯರ್ ರವರಿಗೆ work order ನೀಡುವ ಸಮಯದಲ್ಲಿ Thai Chung ಇಂಜಿಯರ್ಸ್ ರವರಿಗೂ ಕೂಡ ಲೈಸೆನ್ಸ್ ಹೊಂದಿರಲಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕಂಪನಿ ಮತ್ತು ಆಪಾದಿತರ ಕಂಪನಿಯು ಮಾಲೂರಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿಯು ನಮ್ಮ ಕಂಪನಿ ಸಿಟಿಯಲ್ಲಿ ಇದ್ದು ನಮ್ಮ ಕಂಪನಿಯಿಂದ ಸುಮಾರು 15 ಕಿ ಮೀ ದೂರದಲ್ಲಿ ಆಪಾದಿತರ ಕಂಪನಿ ಇದೆ ಎಂದು ನುಡಿಯುತ್ತಾರೆ. Wistron Info com Pvt Ltd., ಪ್ರಾಜೆಕ್ಟ್ ಮಾಡುವ ಸಮಯದಲ್ಲಿ ನಮ್ಮ ಕಂಪನಿಯ ಪರವಾಗಿ ಸಹಿ ಹಾಕಲು ನಾನು ಅಧಿಕಾರ ಉಳ್ಳವನಾಗಿದ್ದು ನಮ್ಮ ಕಂಪನಿಯಲ್ಲಿ ನಾನು ಶೇಖಡ 35 ಶೇರ್ ಹೊಂದಿದ್ದೆ. 2 ನೇ ಆಪಾದಿತರು ನಮ್ಮ ಕಂಪನಿಯಲ್ಲಿ ಶೇಖಡ 50 ಕಿಂತ ಹೆಚ್ಚಿ ನ ಶೇರ್ ಹೋಲ್ಡರ್ ಆಗಿದ್ದರು ಎಂದರೆ ಸರಿಯಲ್ಲ. ನಮ್ಮ ಕಂಪನಿಯ partnership deed or memorandum of association ಆಗಲೀ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅದನ್ನು ಹಾಜರುಪಡಿಸಲು

ಯಾವುದೇ ತೊಂದರೆ ಇಲ್ಲ. ಮೇಲೆ ಹೇಳಿದ ಪ್ರಜೆಕ್ಟ್ 01.09.2021 ರಂದು ಪೂರ್ಣಗೊಂಡಿರುತ್ತದೆ. ನಿಪಿ 1 , 14 ರಿಂದ 16 ದಾಖಲೆಗಳನ್ನು ನಾವು ಸೃಷ್ಟಿ ಮಾಡಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಮತ್ತು ಆಪಾದಿತರ ಕಂಪನಿಯ ನಡುವೆ ಯಾವುದೇ ರೀತಿಯ ಒಡಂಬಡಿಕೆ ಆಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಒಡಂಬಡಿಕೆಯಾಗಿ ವರ್ಕ್ ಆರ್ಡರ್ ನೀಡಿದ್ದಾರೆ ಎಂದು ನುಡಿಯುತ್ತಾರೆ.

(Computerized as per my dictation in open court)
R.O.I.&.A.C.

XXII ADDL.JUDGE,
Court of Small Causes,
Bengaluru.